# ಬೇಡುವುದಕ್ಕೆ ವಿದಾಯ, ಬೋಧನೆಗೆ ಮುನ್ನುಡಿ



ಪೂಜಾ



ಬೇಡುತ್ತಿದ್ದ ವ್ಯಕ್ತಿ ಈಗ ಬೋಧಿಸಲು ಹೊರಟಿದ್ದಾರೆ.

ಬೇಡುತ್ತಿದ್ದ ಕೈ ಅಕ್ಷರ ದಾನಕ್ಕೆ ಮುಂದಾಗಿದೆ. ಇವರ ಹೆಸರು ಪೂಜಾ. ಹುಟ್ಟಿದ್ದು ಗಂಡಾಗಿ, ಬೆಳೆದದ್ದು ಹೆಣ್ಣಾಗಿ. ಮೂಲ ಹೆಸರು ಅಶ್ವತ್ಥಾಮ. ಊರು, ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ ನೀರಮಾನವಿ. ವಿದ್ಯಾರ್ಹತೆ: ಬಿ.ಎ., ಬಿ.ಇಡಿ. ಪದವಿ. ಈಗ ಶಿಕ್ಷಕರ ಆಯ್ಕೆ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಾರೆ. ಸುಪ್ರೀಂ ಕೋರ್ಟ್ ನಿರ್ದೇಶನದ ಮೇರೆಗೆ ಲೈಂಗಿಕ ಅಲ್ಪಸಂಖ್ಯಾತರಿಗೆ ಮೀಸಲು ಸೌಲಭ್ಯ ದೊರೆತ ನಂತರ, ಶಿಕ್ಷಕರ ನೇಮಕಾತಿಯಲ್ಲಿ ಆಯ್ಕೆಯಾಗಿರುವ ಮೊದಲ ಅಭ್ಯರ್ಥಿ ಎನ್ನುವ ಅಗ್ಗಳಿಕೆ ಇವರದು.

ಪೂಜಾ ಎಂದು ಗುರ್ತಿಸಿಕೊಂಡ ನಂತರವೂ ಅಧಿಕೃತ ದಾಖಲೆಗಳಲ್ಲಿ ಅಶ್ವತ್ಥಾಮ ಎನ್ನುವ ಹೆಸರೇ ಇದೆ. ನೌಕರಿ ಪಡೆಯಲು ಹೆಸರು ತೊಡಕಾಗಬಹುದೇ ಎಂಬ ಅನುಮಾನ ಅರ್ಜಿ ಹಾಕುವಾಗ ಕಾಡಿತ್ತು. ‘ನೀನು ಹಳೇ ಹೆಸರಿನಲ್ಲೇ ಅರ್ಜಿ ಹಾಕು. ಮುಂದೆ ಏನಾಗುತ್ತದೆ ನೋಡೋಣ’ ಎಂದು ಅವರ ಸಮುದಾಯ ಸಲಹೆ ನೀಡಿತ್ತು. ನೋಟಿಫಿಕೇಷನ್‌ನಲ್ಲಿ ಇರುವಂತೆ ‘ಇತರೆ ಲಿಂಗ’ ಎಂದು ನಮೂದಿಸಿ ಪೂಜಾ ಅರ್ಜಿ ಸಲ್ಲಿಸಿದರು. ಜಿಲ್ಲಾಧಿಕಾರಿಗಳಿಂದ ಲಿಂಗಪರಿವರ್ತನಾ ದೃಢೀಕರಣ ಪತ್ರವನ್ನೂ ಪಡೆದಿದ್ದರು.

ಈ ಮೊದಲು ಪೂಜಾ ಭಿಕ್ಷೆ ಬೇಡಲು ಬೀದಿ ಬೀದಿ ಸುತ್ತುತ್ತಿದ್ದರು. ರಸ್ತೆಗಳ ಸಿಗ್ನಲ್, ಚಲಿಸುವ ರೈಲಿನಲ್ಲಿ ಚಪ್ಪಾಳೆ ತಟ್ಟಿ ಬೇಡುತ್ತಾ ಬೋಗಿಯಿಂದ ಬೋಗಿಗೆ ಅಲೆಯುತ್ತಿದ್ದರು. ಅವರ ಈ ಅಲೆದಾಟಕ್ಕೆ ಕೊನೆ ಹೇಳಿರುವುದು ಓದು. ಮೀಸಲಾತಿಯ ಸದುಪಯೋಗ ಮಾಡಿಕೊಳ್ಳಬೇಕು ಎನ್ನುವ ಛಲದಿಂದ ಪರಿಶ್ರಮಪಟ್ಟು ಓದಿದ್ದು ಅವರ ಕೈ ಹಿಡಿದಿದೆ, ಸಮಾಜದ ಮುಖ್ಯವಾಹಿನಿಗೆ ಕರೆತಂದಿದೆ.

‘ಸಮಾಜ ವಿಜ್ಞಾನ’ ಶಿಕ್ಷಕಿ ಆಗುವ ಮೂಲಕ, ಮಕ್ಕಳಿಗೆ ಮಾನವೀಯ ನೆಲೆಯಲ್ಲಿ ಪಾಠ ಮಾಡುವ ಉದ್ದೇಶ ಪೂಜಾ ಅವರದು. ‘ಮಕ್ಕಳ ಮನಸ್ಸಿನಲ್ಲಿ ಲಿಂಗ ತಾರತಮ್ಯ, ಲಿಂಗತ್ವ ಕುರಿತ ಅಂಧಕಾರ ಹೋಗಲಾಡಿಸಲು ಶ್ರಮಿಸುತ್ತೇನೆ. ಸಮಾಜ ಹೆಣ್ಣು–ಗಂಡು ಎಂದು ಸರಳವಾಗಿ ವರ್ಗೀಕರಿಸಿದೆ. ತೃತೀಯಲಿಂಗವೇ ಅದರಲ್ಲಿ ಇಲ್ಲ. ಸ್ತ್ರೀ ಪುರುಷರಂತೆ ತೃತೀಯಲಿಂಗ ಕೂಡ ಒಂದು. ಎಲ್ಲ ಮನುಷ್ಯ ಸಮಾನರು. ಜಾತಿಭೇದದಂತೆ ಲಿಂಗಭೇದವೂ ಸಮಾಜಕ್ಕೆ ಮಾರಕ’ ಎನ್ನುವ ತಿಳಿವಳಿಕೆಯನ್ನು ಮಕ್ಕಳಿಗೆ ಮೂಡಿಸುವ ಉಮೇದು ಅವರದು.

ಶಾಲಾ ದಿನಗಳಲ್ಲಿ ಮಾನಸಿಕ ತಳಮಳಗಳನ್ನು ಅದುಮಿಟ್ಟು, ಹುಡುಗನಂತೆಯೇ ಕಾಣುತ್ತಿದ್ದ ಪೂಜಾ, ಸಹಪಾಠಿಗಳಿಂದ ಚುಚ್ಚುಮಾತುಗಳನ್ನು ಕೇಳಿದ್ದಾಳೆ. ‘ಹುಡುಗಿ ತರಾ ಇದ್ದಾನೆ’, ‘ಚಕ್ಕ’ ಎಂದು ಸಹಪಾಠಿಗಳು ರೇಗಿಸಿದ್ದಾರೆ.

‘ನೂರು ವರ್ಷ ಇಲಿಯಾಗಿ ಬದುಕುವುದಕ್ಕಿಂತ ಒಂದು ದಿನ ಹುಲಿಯಾಗಿ ಬದುಕಬೇಕು’ ಎನ್ನುವ ಮಾತು ಅವರಿಗೆ ಪ್ರೇರಣೆ ನೀಡಿದೆ. ತಾನು ಹೆಣ್ಣು ಎನ್ನುವ ಮನಸ್ಸಿನ ಅದಮ್ಯ ಒತ್ತಾಸೆಯಂತೆ ಲಿಂಗ ಬದಲಾವಣೆ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿದ್ದಾರೆ. ರಾಯಚೂರಿನ ಲಿಂಗತ್ವ ಅಲ್ಪಸಂಖ್ಯಾತ ಸಂಸ್ಥೆ ‘ಆಪ್ತಮಿತ್ರ’ ಪೂಜಾ ಅವರಿಗೆ ಸಹಾಯ ಮಾಡಿದೆ. ‘ಸಂಗಮ’ ಕೂಡ ಬೆನ್ನಿಗೆ ನಿಂತಿದೆ.

ಲಿಂಗ ಬದಲಾವಣೆಗೆ ಪೂಜಾ ಅವರ ಕುಟುಂಬ ಆರಂಭದಲ್ಲಿ ವಿರೋಧಿಸಿತ್ತು. ಸಮೂಹ ಮಾಧ್ಯಮಗಳ ಪ್ರಭಾವ ಪೋಷಕರಲ್ಲಿ ಪರಿವರ್ತನೆಯ ಅರಿವು ಮೂಡಿಸಿದೆ. ‘ತಮ್ಮ ಮಗನ ಭಾವನೆಯೂ ಹೀಗೆ ಇರಬಹುದು’ ಎನ್ನುವುದನ್ನು ಅರ್ಥೈಸಿಕೊಂಡು, ಮತ್ತೆ ಮನೆಗೆ ಬರಮಾಡಿಕೊಂಡಿದ್ದಾರೆ. ಕುಟುಂಬದ ಸಹಾನುಭೂತಿ, ಸಮುದಾಯದ ಸಹಾಯ, ಬೇಡುವ ಅವರ ಕೈಗೆ ಲೇಖನಿಯನ್ನು ಕೊಟ್ಟಿದೆ.

ಪೂಜಾ ಅವರೀಗ ಸ್ವತಂತ್ರ ಬದುಕನ್ನು ಕಟ್ಟಿಕೊಳ್ಳುವ ದಾರಿಯಲ್ಲಿದ್ದಾರೆ ಮಾತ್ರವಲ್ಲ, ಮಕ್ಕಳಿಗೆ ಪಾಠ ಹೇಳುವ ಗುರುತರ ಹೊಣೆ ನಿಭಾಯಿಸುವುದಕ್ಕೂ ಸಜ್ಜಾಗಿದ್ದಾರೆ.

